**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>**

**<u>ಉಪಸ್ಥಿತರು</u>**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕಡೂರು.

**ದಿನಾಂಕಃ 4 ನೇ ಜುಲೈ 2020**

**<u>ಅಸಲು ದಾವಾ ಸಂಖ್ಯೆ 52/2016</u>**

**ವಾದಿ/ಯರುಃ**

1) ಬಿ.ಟಿ.ರಾಮಚಂದ್ರಪ್ಪ ಬಿನ್ ಲೇಟ್ ತಿಮ್ಮಯ್ಯ, 67 ವರ್ಷ, ಕೂಲಿ,
2) ಬಿ.ಟಿ.ರಾಜಣ್ಣ ಬಿನ್ ಲೇಟ್ ತಿಮ್ಮಯ್ಯ, 61 ವರ್ಷ, ನಿವೃತ್ತ ಸರ್ಕಾರಿ ನೌಕರ,
   ಇಬ್ಬರೂ ವಾಸ ಃ ಸಿದ್ದಮರಿಯಪ್ಪ ಬಡಾವಣೆ, ಬೀರೂರು ಟೌನ್, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎಸ್.ಎನ್.ಗಿರೀಶ್, ನ್ಯಾಯವಾದಿಗಳು)

**-ವಿರುದ್ದ-**

**ಪ್ರತಿವಾದಿ/ಯರುಃ**

1) ಲಕ್ಷ್ಮಮ್ಮ ಕೋಂ ಲೇಟ್ ರುದ್ರಪ್ಪ, 76 ವರ್ಷ, ಗೃಹಿಣಿ,
2) ನೀಲಕಂಠಪ್ಪ ಬಿನ್ ಲೇಟ್ ರುದ್ರಪ್ಪ, 59 ವರ್ಷ, ಸರ್ಕಾರಿ ನೌಕರ,

   ಇಬ್ಬರೂ ವಾಸ ಃ ಅಶೋಕ ನಗರ, ಭೂತನಗುಡಿ ಬೀದಿ, ಬೀರೂರು ಟೌನ್ ಮತ್ತು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎನ್.ಪಿ.ಶೇಷಪ್ಪ, ನ್ಯಾಯವಾದಿಗಳು.)

****

**ಮಧ್ಯಂತರ ಅರ್ಜಿ ಸಂಖ್ಯೆ- 6**

**ಅರ್ಜಿದಾರರು :** ನೀಲಕಂಠಪ್ಪ

**-ವಿರುದ್ದ-**

**ಎದುರುದಾರರು:** ರಾಮಚಂದ್ರಪ್ಪ ಮತ್ತು ಇನ್ನೊಬ್ಬರು

******

**ಮಧ್ಯಂತರ ಅರ್ಜಿ ಸಂಖ್ಯೆ - 6 ರ ಕುರಿತಾದ ಆದೇಶ**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ತಿದ್ದುಪಡಿಯ ಅಂಶಗಳನ್ನು ಪ್ರತಿವಾದಪತ್ರದ ಅನುಸೂಚಿಯಲ್ಲಿ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2. 2 ನೇ ಪ್ರತಿವಾದಿಯು ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆ :**

ನಾನು ಈ ಪ್ರಕರಣದ 2 ನೇ ಪ್ರತಿವಾದಿಯಾಗಿದ್ದು ಈ ಪ್ರಮಾಣ ಪತ್ರವನ್ನು ನನ್ನ ಮತ್ತು 1 ನೇ ಪ್ರತಿವಾದಿಯ ಪರವಾಗಿ ಸಲ್ಲಿಸುತ್ತಿದ್ದೇನೆ. ನಾನು ಈ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ನನಗೆ ಸಂಬಂಧಿಸಿದ ಸ್ವತ್ತನ್ನು ಪ್ರತಿವಾದ ಪತ್ರದ ಅನುಸೂಚಿಯಲ್ಲಿ ನಮೂದಿಸಿರುತ್ತೇನೆ. ಪ್ರತಿವಾದ ಪತ್ರದ ಅನುಸೂಚಿತ ಸ್ವತ್ತಿನ ಉತ್ತರಕ್ಕೆ ನನ್ನ ತಂದೆ ರುದ್ರಪ್ಪನವರಿಗೆ ಸೇರಿದ ಸ್ವತ್ತು ಇರುತ್ತದೆ. ಅಂತೆಯೇ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಆದರೆ ಪ್ರತಿವಾದ ಪತ್ರವನ್ನು ಸಲ್ಲಿಸುವ ಕಾಲಕ್ಕೆ ಬೆರಳಚ್ಚಿನ ತಪ್ಪಿನಿಂದಾಗಿ ಹಾಗೂ ಕಣ್ತಪ್ಪಿನಿಂದಾಗಿ ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಕುರಿತು ಬದಲಾವಣೆಯಾಗಿ ನಮೂದು ಆಗಿರುತ್ತದೆ. ಮೇಲ್ಕಂಡ ತಪ್ಪು ನಮೂದು ಬೆರಳಚ್ಚಿನಿಂದ ಆಗಿದ್ದು ಸದರಿ ಅಂಶ ನನಗೆ ಇತ್ತೀಚೆಗೆ ತಿಳಿದು ಬಂದಿರುತ್ತದೆ. ಹಾಗಾಗಿ

ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಅರ್ಜಿಯಲ್ಲಿ ನಮೂದಿಸಿರುವಂತೆ ತಿದ್ದುಪಡಿ ಮಾಡಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ನನಗೆ ತುಂಬಲಾರದ ಹಾನಿಯುಂಟಾಗುತ್ತದೆ ಹಾಗೂ ಪ್ರಕರಣಗಳ ಬಾಹುಳ್ಯತೆಗೆ ಕಾರಣವಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**3. ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ-6 ಕ್ಕೆ ವಾದಿಯ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು ಸದರಿ ತಕರಾರಿನ ಅಂಶಗಳು ಕೆಳಕಂಡಂತೆ ಇರುತ್ತದೆ :**

ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ ಅಥವಾ ವಾಸ್ತವೀಕತೆಯ ಅಡಿಯಲ್ಲಾಗಲೀ ಊರ್ಜಿತವಾಗುವುದಿಲ್ಲ. ಪ್ರತಿವಾದಿಯರು ಈಗಾಗಲೇ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರತಿವಾದ ಪತ್ರದಲ್ಲಿ ವಾದಿಯ ದಾವಾ ಅನುಸೂಚಿತ ಸ್ವತ್ತಿನ ಮಾಲೀಕತ್ವವನ್ನು ಮತ್ತು ಅಸ್ತಿತ್ವವನ್ನು ಅಲ್ಲಗಳೆದಿರುತ್ತಾರೆ. ಪ್ರಸ್ತಾವಿತ ತಿದ್ದುಪಡಿಯು ಕಾಲಪರಿಮಿತಿಯನ್ನು ಮೀರಿದ್ದಾಗಿದ್ದು ಪ್ರಕರಣದ ವಿಲೇವಾರಿಗೆ ಅಗತ್ಯತೆ ಇರುವುದಿಲ್ಲ. ವಾದಿಯು ಈಗಾಗಲೇ ತನ್ನ ಪರ ಸಾಕ್ಷ್ಯ ಮಾಡಿದ್ದು ಸದರಿ ಸಾಕ್ಷಿದಾರರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ. ಒಂದೊಮ್ಮೆ ನ್ಯಾಯಾಲಯವು ಪ್ರಸ್ತಾವಿತ ತಿದ್ದುಪಡಿಯನ್ನು ಮಾಡಲು ಅನುಮತಿಯನ್ನು ನೀಡಿದ್ದಲ್ಲಿ ಪ್ರಕರಣದ ಸ್ವರೂಪ ಬದಲಾವಣೆಯಾಗುತ್ತದೆ. ಪ್ರತಿವಾದಿಯರು ತಮ್ಮ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳಿಗೆ ಪೂರಕವಾಗಿ ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಸದರಿ ಅರ್ಜಿಯನ್ನು ಪರಿಗಣಿಸಲು ಬರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. **ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:**

1) ಪ್ರತಿವಾದಿಯರು/ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ - 6 ರಲ್ಲಿ ನಮೂದಿಸಿರುವಂತೆ ಪ್ರತಿವಾದಪತ್ರವನ್ನು ತಿದ್ದುಪಡಿ ಮಾಡಲು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2) ಹಾಗಿದ್ದಲ್ಲಿ ಯಾವ ಆದೇಶ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

ಅಂಶ – 1 : ಸಕಾರಾತ್ಮಕವಾಗಿ,

ಅಂಶ – 2 : ಅಂತಿಮ ಆದೇಶದಂತೆ,

**ಕಾ ರ ಣ ಗ ಳು**

7. **ಅಂಶ – 1** :- ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

8. ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ತಿದ್ದುಪಡಿಯ ಅಂಶಗಳನ್ನು ಪ್ರತಿವಾದಪತ್ರದಲ್ಲಿನ ಚೆಕ್ಕುಬಂದಿಯ ಕುರಿತು ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

9. ಪ್ರತಿವಾದಿಯರ ಪರ ವಕೀಲರು ಪ್ರಸ್ತುತ ಮಧ್ಯಂತರ ಅರ್ಜಿಯ ಕುರಿತು ವಾದ ಮಂಡನೆಯ ಕಾಲಕ್ಕೆ ಪ್ರತಿವಾದಪತ್ರವನ್ನು ಸಲ್ಲಿಸುವ ಕಾಲಕ್ಕೆ ಕಣ್ತಪ್ಪಿನಿಂದ ಹಾಗೂ ಬೆರಳಚ್ಚಿನ ತಪ್ಪಿನಿಂದ ಪ್ರತಿವಾದಪತ್ರದಲ್ಲಿನ ಚೆಕ್ಕುಬಂದಿಯ ಕುರಿತು ತಪ್ಪು ನಮೂದನ್ನು ಮಾಡಿದ್ದು, ನಂತರದ ಕಾಲದಲ್ಲಿ ಪ್ರತಿವಾದಪತ್ರದಲ್ಲಿನ ಸ್ವತ್ತಿನ ಉತ್ತರ ಮತ್ತು ದಕ್ಷಿಣ ದಿಕ್ಕಿನ ಕುರಿತು ಸ್ಪಷ್ಟತೆ ಕಂಡು ಬಂದಿದ್ದು ಹಾಗಾಗಿ ಈ ತಿದ್ದುಪಡಿಯನ್ನು

ಮಾಡಲು ಅನುವು ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯು ಕಾಲಪರಿಮಿತಿಯನ್ನು ಮೀರಿದ್ದು ಸದರಿ ಅಂಶವು ಈ ಪ್ರಕರಣದ ವಿವಾದಾಂಶಗಳನ್ನು ನಿರ್ಣಯಿಸಲು ಅಗತ್ಯತೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಈಗಾಗಲೇ ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾದ ವಾದಿಯ ಮಾಲೀಕತ್ವವನ್ನು ಮತ್ತು ದಾವಾ ಅನುಸೂಚಿತ ಸ್ವತ್ತಿನ ಅಸ್ತಿತ್ವವನ್ನು ಅಲ್ಲಗಳೆದಿರುವುದರಿಂದ ಈ ಅರ್ಜಿಯು ಊರ್ಜಿತವಾಗುವುದಿಲ್ಲವೆಂದು ಹೇಳಿರುತ್ತಾರೆ.

10. ಮೇಲ್ಕಂಡಂತೆ ಉಭಯ ಪಕ್ಷಗಾರರ ಹೇಳಿಕೆಗಳನ್ನು ಪರಿಶೀಲಿಸಲಾಗಿ ಈ ಪ್ರಕರಣದಲ್ಲಿ ಈಗಾಗಲೇ ಉಭಯ ಪಕ್ಷಗಾರರು ವಾದ ಪ್ರತಿವಾದಪತ್ರವನ್ನು ಸಲ್ಲಿಸಿ ವಿವಾದಾಂಶಗಳು ರೂಪಿತವಾಗಿ ವಾದಿ ಪರ ಸಾಕ್ಷ್ಯ ಮುಗಿದಿದ್ದು ಪ್ರಕರಣವನ್ನು ಪ್ರತಿವಾದಿ ಪರ ಸಾಕ್ಷ್ಯಕ್ಕಾಗಿ ನಿಗದಿಪಡಿಸಿದ್ದು, ಈ ಹಂತದಲ್ಲಿ ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ -6 ನ್ನು ಸಲ್ಲಿಸಿರುತ್ತಾರೆ.

11. ಪ್ರತಿವಾದಿಯರು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪ್ರತಿವಾದಪತ್ರದ ತಿದ್ದುಪಡಿಗಾಗಿ ಸಲ್ಲಿಸಿದ್ದು ಆದ್ದರಿಂದ ಈ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ನ್ನು ಪರಿಶೀಲಿಸಲಾಗಿರುತ್ತದೆ. **ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಈ ಕೆಳಕಂಡಂತೆ ಉಲ್ಲೇಖಿತವಾಗಿರುತ್ತದೆಃ**

> **“**Amendment of pleadings:-The Court may at any stage of the proceedings allow either party to alter or amend his pleadings in such manner and on such terms as may be just, and all such amendments shall be made as may be necessary for the purpose of determining the real questions in controversy between the parties:
>
> Provided that no application for amendment shall be allowed after the trial has commenced, unless the Court comes to the conclusion that in spite of due

> diligence, the party could not have raised the matter before the commencement of trial."

12. ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ ಯಾವುದೇ ಒಂದು ತಿದ್ದುಪಡಿ ಅರ್ಜಿಯನ್ನು ಸಾಕ್ಷ್ಯ ಪ್ರಾರಂಭವಾಗುವುದಕ್ಕಿಂತ ಮೊದಲು ಸಲ್ಲಿಸಬೇಕಾಗುತ್ತದೆ ಎಂದು ಒಂದೊಮ್ಮೆ ಸಾಕ್ಷ್ಯ ಪ್ರಾರಂಭವಾದ ನಂತರದಲ್ಲಿ ಸಲ್ಲಿಸಿದಲ್ಲಿ ಸದರಿ ಅರ್ಜಿಯನ್ನು ಈ ಮೊದಲು ಸಲ್ಲಿಸಲು ಎಲ್ಲಾ ರೀತಿಯ ಜಾಗೃತಿಯನ್ನು ತೆಗೆದುಕೊಂಡಿದ್ದಾಗ್ಯೂ ಸಲ್ಲಿಸಲು ಸಾಧ್ಯವಾಗಲಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಲ್ಲಿ ನ್ಯಾಯಾಲಯವು ಅಂತಹ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಉಲ್ಲೇಖಿಸಿರುತ್ತದೆ.

13. **ಅಂತೆಯೇ ಈ ಅರ್ಜಿಯನ್ನು ಪರಿಗಣಿಸುವ ಕುರಿತಾಗಿ ನ್ಯಾಯಾಲಯವು ಈ ಕೆಳಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಿರುತ್ತದೆ :**

**2005 (13) SCC 89**

**Sajjan Kumar Vs. Ramkishan**

> "A. CODE OF CIVIL PROCEDURE, 1908 – Order 16, Rule 17- Amendment of plaint in final stages of suit when permissible-
>
> Imposition of cost - Incorrect description of suit property in plaint - Proposed amendment necessary to bring real question in controversy between the parties to the fore - Refusal to permit amendment likely to create needless complications at stage of execution in the event of success of plaintiff in the suit though appellant plaintiff ought to have been diligent in promptly seeking amendment in plaint at an early stage of suit, more-so when error in question had been point out in W.S. held still due to the above reasons amendment should have been allowed - Amendment allowed with imposition of cost of Rs.1,000/-"

14. ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಿದಾಗ ವಾದಪತ್ರದಲ್ಲಿ ದಾವಾ ಸ್ವತ್ತಿನ ಗುರ್ತಿಸುವಿಕೆಯ ಕುರಿತು ತಪ್ಪು ನಮೂದು ಆಗಿದ್ದಾಗ ಅಂತಹ ತಪ್ಪು ನಮೂದುಗಳನ್ನು ದಾವೆಯ ಅಂತಿಮ ಹಂತದಲ್ಲೂ ಕೂಡ ಸರಿಪಡಿಸಬಹುದು ಎಂದು ಸ್ಪಷ್ಟವಾಗಿ ನಿರ್ಣಯಿಸುತ್ತದೆ. ಅಂತೆಯೇ ಸದರಿ ಅರ್ಜಿಯನ್ನು ಪುರಸ್ಕರಿಸುವುದರಿಂದ ಉಭಯ ಪಕ್ಷಗಾರರ ನಡುವಿನ ವಿವಾದ ನಿರ್ಣಯದ ನಂತರ ವಾದಿಯು ಡಿಕ್ರಿ ಪಡೆದಲ್ಲಿ ಅಂತಹ ಸಮಯದಲ್ಲಿ ಅಮಲ್ಜಾರಿ ಅರ್ಜಿಯನ್ನು ಕಾರ್ಯಗತಗೊಳಿಸಲು ಈ ತಿದ್ದುಪಡಿ ಅವಶ್ಯಕ ಎಂದು ಉಲ್ಲೇಖಿಸಿರುತ್ತದೆ. ಅಂತೆಯೇ ಸದರಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಲು ವಿಳಂಬ ಮಾಡಿರುವ ಕಾರಣದಿಂದ ವಾದಿಗೆ ಖರ್ಚನ್ನು ವಿಧಿಸಬಹುದು ಎಂದು ನಮೂದಿಸಿರುತ್ತದೆ.

15. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಲಾಗಿ ಈ ಪ್ರಕರಣದಲ್ಲಿ ಪ್ರತಿವಾದಿಯರು ಪ್ರತಿವಾದ ಪತ್ರದ ಸ್ವತ್ತಿನ ಚೆಕ್ಕುಬಂದಿಯ ಕುರಿತು ತಿದ್ದುಪಡಿ ಮಾಡಲು ಕೋರಿರುತ್ತಾರೆ. ಪ್ರಸ್ತುತ ಈ ಪ್ರಕರಣದಲ್ಲಿ ಪ್ರತಿವಾದಿಯರು ಪ್ರತಿಹಕ್ಕು ದಾವೆಯ ಮೂಲಕ ಯಾವುದೇ ಪರಿಹಾರವನ್ನು ಕೋರಿರುವುದಿಲ್ಲ. ಬದಲಾಗಿ ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ತಮಗೆ ಸೇರಿದ ಸ್ವತ್ತಿನ ಕುರಿತಾಗಿ ನಮೂದು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ವಾದಿಯು ಪರ ಸಾಕ್ಷ್ಯ ಮುಗಿದಿದ್ದು, ಪ್ರಕರಣವನ್ನು ಪ್ರತಿವಾದಿಯರ ಪರ ಸಾಕ್ಷ್ಯಕ್ಕಾಗಿ ನಿಗದಿಪಡಿಸಲಾಗಿದ್ದು ಈ ಹಂತದಲ್ಲಿ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯರು ತಿದ್ದುಪಡಿ ಮೂಲಕ ಚೆಕ್ಕುಬಂದಿಯನ್ನು ನಮೂದಿಸಿದ್ದಾಗ್ಯೂ ಸದರಿ ಅಂಶವನ್ನು ರುಜುವಾತುಪಡಿಸುವ ಹೊಣೆಗಾರಿಕೆ ಪ್ರತಿವಾದಿಯರದ್ದೇ ಆಗಿರುತ್ತದೆ. ಅಂತೆಯೇ ತಿದ್ದುಪಡಿ ಪ್ರತಿವಾದಪತ್ರದ ಕುರಿತು ವಾದಿಗೆ ಪ್ರತ್ಯುತ್ತರವನ್ನು ಸಲ್ಲಿಸಲು ಅವಕಾಶ ಕೂಡ ಕಲ್ಪಿಸಿಕೊಡಲಾಗುತ್ತದೆ. ಅಂತೆಯೇ ಪ್ರಸ್ತಾವಿತ ತಿದ್ದುಪಡಿಗೆ ಅನುವು ಮಾಡಿಕೊಡುವುದರಿಂದ ದಾವೆಯ ಸ್ವರೂಪಕ್ಕೆ ಯಾವುದೇ ಬದಲಾವಣೆ ಉಂಟಾಗುವುದಿಲ್ಲ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ.

16. ವಾದ ಪ್ರತಿವಾದ ಪತ್ರಗಳ ತಿದ್ದುಪಡಿ ಅರ್ಜಿಯನ್ನು ಪರಿಗಣಿಸುವ ಕುರಿತು ನ್ಯಾಯಾಲಯವು ಸದರಿ ತಿದ್ದುಪಡಿಯನ್ನು ಮಾಡುವುದರಿಂದ ದಾವೆಯ ಸ್ವರೂಪದಲ್ಲಿ ಮಾರ್ಪಾಡು ಆಗುತ್ತದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಪ್ರತಿವಾದಿಯರು ಸಲ್ಲಿಸಿರುವ ತಿದ್ದುಪಡಿಯ ಅಂಶಗಳನ್ನು ಪ್ರತಿವಾದಪತ್ರದಲ್ಲಿ ನಮೂದು ಮಾಡುವುದರಿಂದ ದಾವೆಯ ಸ್ವರೂಪದಲ್ಲಿ ಯಾವುದೇ ರೀತಿಯ ಮಾರ್ಪಾಡು ಉಂಟಾಗುವುದಿಲ್ಲ. ಅಂತೆಯೇ ತಿದ್ದುಪಡಿಗೆ ಅನುಮತಿ ನೀಡಿದ್ದಲ್ಲಿ ವಾದಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಹಾಗಾಗಿ ಪ್ರತಿವಾದಿಯರಿಗೆ ತಮ್ಮ ನಿಲುವುಗಳನ್ನು ಸಾಬೀತುಪಡಿಸಲು ಅವಕಾಶವನ್ನು ನೀಡುವುದು, ನೈಸರ್ಗಿಕ ನಿಯಮಕ್ಕೆ ಅನುಸಾರವಾಗಿ ಮತ್ತು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಅರ್ಜಿಯನ್ನು ಪುರಸ್ಕರಿಸುವುದು ಅಗತ್ಯತೆ ಇರುತ್ತದೆ. ಆದ್ದರಿಂದ ಪ್ರತಿವಾದಿಯರು ಪ್ರಸ್ತಾವಿತ ತಿದ್ದುಪಡಿಯಲ್ಲಿ ಕೋರಿರುವ ತಿದ್ದುಪಡಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಲಾಗುತ್ತದೆ. ಪ್ರತಿವಾದಿಯರು ಪ್ರಸ್ತುತ ಈ ಅರ್ಜಿಯನ್ನು ಸಲ್ಲಿಸಲು ವಿಳಂಬ ಮಾಡಿರುತ್ತಾರೆ ಎಂಬ ಒಂದೇ ಕಾರಣದಿಂದ ಸದರಿ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ ದಾವೆಯ ಕುರಿತಾಗಿ ಗುಣವಾಗುಣಗಳ ಆಧಾರದಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಪ್ರತಿವಾದಿಯರು ವಿಳಂಬಕಾರಿಯಾಗಿ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಾದಿಗೆ ಸದರಿ ವಿಳಂಬದ ಕಾರಣಕ್ಕಾಗಿ ರೂ.500/- ಖರ್ಚನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪುರಸ್ಕರಿಸಿ ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗುತ್ತದೆ.

17. <u>ಅಂಶ – 2</u> ಃ ಈ ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದಾಗಿ ಕೆಳಗಿನಂತೆ ಆದೇಶಿಸಿರುತ್ತೇನೆ ಃ

<u>ಆ ದೇ ಶ</u>

ಪ್ರತಿವಾದಿಯರು/ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರ ಅಡಿಯಲ್ಲಿ

ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 6 ನ್ನು ರೂ.500/- ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪ್ರಕರಣವನ್ನು ಪ್ರತಿವಾದಪತ್ರದ ತಿದ್ದುಪಡಿಗಾಗಿ ಹಾಗೂ ತಿದ್ದುಪಡಿ ಪ್ರತಿವಾದಪತ್ರವನ್ನು ಸಲ್ಲಿಸಲು ನಿಗದಿಪಡಿಸಿ ದಿನಾಂಕ 15.07.2020 ಕ್ಕೆ ಪ್ರಕರಣವನ್ನು ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 4 ನೇ ಜುಲೈ 2020 ರಂದು ನಾನು ಉದ್ಘೋಷಿಸಿದ್ದೇನೆ.)

ಸಹಿ
(ರಘುರಾಮ.ಎನ್.ಎಸ್.)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕಡೂರು.